ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 106 ಎಲ್‌ಡಬ್ಲ್ಯೂಎ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 29.11.2021.

# ಅಧಿಸೂಚನೆ

ಕರ್ನಾಟಕ ರಾಜ್ಯದಾದ್ಯಂತ "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ" ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ "ಕನಿಷ್ಠ ವೇತನ ಕೋಷ್ಟಕ" ದಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರವು ತೀರ್ಮಾನಿಸಿದೆ. ಕನಿಷ್ಠ ವೇತನ ಕಾಯ್ದೆ 1948 (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1)(ಬಿ) ಮತ್ತು 5(1)(ಬಿ) ರಡಿಯಲ್ಲಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕರಡು ಅಧಿಸೂಚನೆಯನ್ನು ಪ್ರಕಟಿಸಲಾಗಿದೆ. ಈ ಕರಡು ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ದಿನಾಂಕದಿಂದ ಎರಡು (2) ತಿಂಗಳ ಅವಧಿಯೊಳಗೆ ಬಾಧಿತರಾಗುವ ವ್ಯಕ್ತಿಗಳಿಂದ ಉದ್ಯೋಗದಾತರಿಂದ/ ಉದ್ಯೋಗಿಗಳಿಂದ/ ಸಂಘ ಸಂಸ್ಥೆಗಳಿಂದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸರ್ಕಾರದಿಂದ ಸ್ವೀಕರಿಸಲಾಗುವುದು. ತದನಂತರ ಬಂದ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸರ್ಕಾರವು ಪರಿಗಣಿಸುವುದಿಲ್ಲ. ಈ ಕುರಿತು ಸಲಹೆಗಳು ಹಾಗೂ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಾರ್ವಜನಿಕರು / ಉದ್ಯೋಗದಾತರು / ಉದ್ಯೋಗಿಗಳು / ಸಂಘ ಸಂಸ್ಥೆಗಳು ಅವುಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು-560001 ಇವರಿಗೆ ಸಲ್ಲಿಸಬಹುದಾಗಿರುತ್ತದೆ.

ಕನಿಷ್ಠ ವೇತನ ಕಾಯ್ದೆ 1948ರ ಕಲಂ 3(1)(ಬಿ) ಮತ್ತು 5(1)(ಬಿ)ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರವು ಈ ಕೆಳಕಂಡ "ಕನಿಷ್ಠ ವೇತನ ಕೋಷ್ಟಕ" ದಲ್ಲಿ ನಿರ್ದಿಷ್ಟಪಡಿಸಿರುವಂತೆ, ಕರ್ನಾಟಕ ರಾಜ್ಯದಾದ್ಯಂತ ಕನಿಷ್ಠ ವೇತನ ದರಗಳು ಜಾರಿಗೆ ಬರುವಂತೆ ಈ ಮೂಲಕ ಪರಿಷ್ಕರಿಸಲು ಪ್ರಸ್ತಾಪಿಸಿದೆ.

## "ಕನಿಷ್ಠ ವೇತನ ಕೋಷ್ಟಕ"

| ಕ್ರ ಸಂ | ಕೆಲಸದ ವರ್ಗಗಳು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು | ರಾಜ್ಯದ ಎಲ್ಲಾ ನಗರಸಭೆಗಳು (ಗ್ರೇಡ್-1) | ರಾಜ್ಯದ ಎಲ್ಲಾ ನಗರಸಭೆಗಳು (ಗ್ರೇಡ್-2) ಹಾಗೂ ಪುರಸಭೆಗಳು | ರಾಜ್ಯದ ಎಲ್ಲಾ ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳು |
|---|---|---|---|---|---|
| | | ಮಾಸಿಕ ದರಗಳು | | | |
| 1 | ➢ ಕೆಮಿಸ್ಟ್<br>➢ ಸೂಪರ್ ವೈಸರ್ (ಸ್ಯಾನಿಟರಿ) | 17955.52 | 17471.52 | 16999.62 | 16382.52 |

| | | | | | |
|---|---|---|---|---|---|
| 2 | ➢ ಗುಮಾಸ್ತ<br>➢ ಕ್ಲರ್ಕ್<br>➢ ಕಂಪ್ಯೂಟರ್ ಆಪರೇಟರ್<br>➢ ಡಾಟಾ ಎಂಟ್ರಿ ಆಪರೇಟರ್<br>➢ ಕರ ವಸೂಲಿಗಾರರು<br>➢ ಎಲೆಕ್ಟ್ರೀಷಿಯನ್<br>➢ ಲ್ಯಾಬ್ ಟೆಕ್ನೀಷಿಯನ್<br>➢ ಸಹಾಯಕ ಗ್ರಂಥಪಾಲಕ | 16564.02 | 16116.32 | 15729.12 | 15196.72 |
| 3 | ಚಾಲಕರು ಕಂ ಆಪರೇಟರ್ಸ್ | | | | |
| | ➢ ಯುಜಿಡಿ<br>➢ ಜೆಸಿಬಿ<br>➢ ಕಾಂಪಾಕ್ಟ್ ಮಷಿನ್<br>➢ ಸ್ವೀಪಿಂಗ್ ಮಷಿನ್ | 15777.52 | 15354.02 | 14991.02 | 14446.52 |
| 4 | ಚಾಲಕರು | 15112.02 | 14749.02 | 14386.02 | 13902.02 |
| | ➢ ಲಾರಿ/ಬಸ್ಸು/ ಟ್ರಾಕ್ಟರ್/ಜೀಪು/ಕಾರು | | | | |
| | ➢ ಕ್ಲೀನರ್ಸ್ | 13974.62 | 13660.02 | 13345.42 | 12873.52 |
| 5 | ➢ ಪಂಪ್ ಆಪರೇಟರ್<br>➢ ಮೆಕ್ಯಾನಿಕ್<br>➢ ಬಾಲವಾಡಿ ಕಾರ್ಯಕರ್ತರು<br>➢ ಪ್ಲಂಬರ್<br>➢ ಹಾರ್ಟಿಕಲ್ಚರ್ ಅಸಿಸ್ಟಂಟ್<br>➢ ಪಂಪು ರಿಪೇರಿ ಮಾಡುವವರು<br>➢ ವಾಟರ್ ಮ್ಯಾನ್ (ನೀರು ಗಂಟಿ)<br>➢ ವಾಲ್ವ್ ಮ್ಯಾನ್ (ನೀರು ಸರಬರಾಜು) | 14657.72 | 14325.52 | 13993.32 | 13509.32 |

| | | | | | |
|---|---|---|---|---|---|
| | ➢ ಜವಾನರು<br>➢ ಅಟೆಂಡರ್<br>➢ ಗಾರ್ಡನರ್<br>➢ ದಫೇದಾರ್<br>➢ ಸ್ಮಶಾನ ಕಾವಲುಗಾರ<br>➢ ಕಾವಲುಗಾರ<br>➢ ಕಛೇರಿ ಮತ್ತು ಆವರಣ ಸ್ವಚ್ಛತೆಗಾರ / ಶುಚಿಗೊಳಿಸುವುದು<br>➢ ಕುಶಲರಲ್ಲದ ಇತರೆ ವರ್ಗಗಳು | 13974.62 | 13660.02 | 13345.42 | 12873.52 |
| 7 | ➢ ರಸ್ತೆಗಳನ್ನು ಗುಡಿಸುವುದು<br>➢ ಯಂತ್ರಗಳ ಸಹಾಯದಿಂದ ಒಳಗೊಂಡಂತೆ ಶುಚಿತ್ವಗೊಳಿಸುವುದನ್ನು ಒಳಗೊಂಡಂತೆ ಒಳಚರಂಡಿ, ಸ್ನಾನಗೃಹ ಮತ್ತು ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು.<br>➢ ಕಸ ಮತ್ತು ತ್ಯಾಜ್ಯ ವಸ್ತುಗಳ ವಿಲೇವಾರಿ, ಲೋಡಿಂಗ್ ಮತ್ತು ಅನ್‌ಲೋಡಿಂಗ್ ಕೆಲಸಗಾರರು | 17306.52 | 16877.52 | 16448.52 | 16019.52 |

ಮೇಲ್ಕಂಡ ಕನಿಷ್ಠ ವೇತನ ದರಗಳನ್ನು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. ವ್ಯತ್ಯಾಸವಾಗುವ ತುಟ್ಟಿಭತ್ಯೆ:-

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ, ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2020 ರಿಂದ ಡಿಸೆಂಬರ್ 2021) ರ ಸರಾಸರಿ ಆಧಾರದ ಮೇಲೆ 2021 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 7616 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-

ಅ) ಮಾಸಿಕ ವೇತನವನ್ನು ಪಡೆಯುವವರು:-

ತಿಂಗಳ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x 30 ದಿನಗಳು

ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, ನಾಲ್ಕು (4) ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಈ ಕೆಳಕಂಡಂತೆ ಲೆಕ್ಕ ಹಾಕತಕ್ಕದ್ದು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

ಆ) ದಿನಗೂಲಿ ವೇತನ ಪಡೆಯುವವರು :-

$$\text{ದಿನದ ತುಟ್ಟಿಭತ್ಯೆ} = \frac{\text{ಪ್ರತಿ ವರ್ಷ ಹೆಚ್ಚಾಗುವ ಅಂಶಗಳು x ತುಟ್ಟಿಭತ್ಯೆಯ ದರ x 30ದಿನಗಳು}}{26}$$

2. ಮಹಿಳೆಯರು, ಪುರುಷರು, ತೃತೀಯ ಲಿಂಗಿಗಳು ಮತ್ತು ವಿಕಲಚೇತನರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಎಲ್ಲರಿಗೂ ಸಮಾನ ದರದ ವೇತನಗಳನ್ನು ಉದ್ಯೋಗದಾತರು ಸಂದಾಯ ಮಾಡತಕ್ಕದ್ದು.
3. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.
4. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.
5. ದಿನಗೂಲಿ ನೌಕರರಿಗೆ ಅವರ ದಿನದ ವೇತನ ದರಗಳನ್ನು ಕಂಡು ಹಿಡಿಯಬೇಕಾದಲ್ಲಿ ತಿಂಗಳ ವೇತನ ದರವನ್ನು 26 ದಿನಗಳಿಂದ ಭಾಗಿಸಬೇಕು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.
6. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.
7. ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡು ಪಟ್ಟು ವೇತನವನ್ನು ಪಾವತಿಸತಕ್ಕದ್ದು.
8. ವೇತನ ಲೆಕ್ಕಾಚಾರದಲ್ಲಿ ಚಿಲ್ಲರೆ ಬಂದ ಪಕ್ಷದಲ್ಲಿ ಅದನ್ನು ಸಮೀಪದ 50 ಪೈಸೆಗೆ ಪೂರ್ಣಗೊಳಿಸುವುದು.
9. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.
10. ನೌಕರರುಗಳ ವೇತನವನ್ನು ಚೆಕ್ ಮೂಲಕ ಪಾವತಿಸುವುದು ಅಥವಾ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

A. Umadevi 29/11/2021

(ಎ. ಉಮಾದೇವಿ)
ಪೀಠಾಧಿಕಾರಿ-2,
ಕಾರ್ಮಿಕ ಇಲಾಖೆ (ಕನಿಷ್ಠ ವೇತನ).

ಇವರಿಗೆ,

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.

2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ. (ಕಾರ್ಮಿಕ ಆಯುಕ್ತರ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).
4. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಟ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಚೇರಿ, ಕಾರ್ಮಿಕ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
7. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

ಪ್ರತಿಗಳು:-

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ.
3. ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.
4. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ.